ದಲಿತ ಸಾಹಿತ್ಯವನ್ನು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಪೂರ್ವಗ್ರಹ ಪೀಡಿತರಾಗಿ ದಲಿತರನ್ನು ನೋಡಲಾಗುತ್ತದೆ. ಜಾತಿಯಿಂದಲೂ ಅಭಿರುಚಿಯಲ್ಲಿ ಅಡಚಣೆಯು ನಿರ್ಮಾಣವಾಗುತ್ತದೆ. **Taste is the product of Caste.** ದಲಿತ ಸಾಹಿತ್ಯದಲ್ಲಿ ಮನುಷ್ಯನ ಹಕ್ಕಿನ ದೃಷ್ಟಿಯಿಂದ ನೋಡುವ ಅಗತ್ಯವಿದೆ.

◆ ನಿರ್ಲಿಪ್ತತೆ ಹಾಗೂ ಆಕ್ರೋಶವನ್ನು ದಲಿತ ಸಾಹಿತ್ಯದ ಪ್ರಮುಖ ಲಕ್ಷಣವೆಂದು ಭಾವಿಸಲಾಗಿದೆ. ಇದರಲ್ಲಿ ಯಾವುದು ಮುಖ್ಯ?

ದಲಿತ ಸಾಹಿತ್ಯ ತಟಸ್ಥವಾಗಿಲ್ಲ, ದಲಿತ ಬರಹವು ನಿರ್ಲಿಪ್ತವಾಗಿ ಇರಲಾರದು. ದಲಿತ ಲೇಖಕರು ಒಂದು ನಿಲುವಿನ ಪ್ರಕಾರ ಬರಹವನ್ನು ಮಾಡುತ್ತಿರುತ್ತಾರೆ. ಅವನು ಕಾರ್ಯಕರ್ತನಾಗಿರುವುದರಿಂದ ಅವನ ಸಾಹಿತ್ಯದಲ್ಲಿ ಅವನ ಸಾಮಾಜಿಕ ಬದ್ಧತೆಯು ಮಹತ್ವದ್ದಾಗಿರುತ್ತದೆ. ದಲಿತರ ಮೇಲೆ ಅನ್ಯಾಯವಾಗುತ್ತಿರುವಾಗ ದಲಿತ ಲೇಖಕ ತಟಸ್ಥನಾಗಿರುವುದು ಸಾಧ್ಯವಿಲ್ಲ. ಅವನು ದಲಿತರ, ದಮನಿತರ ಪ್ರಶ್ನೆಯನ್ನು ಎತ್ತಿಕೊಂಡು ಬರೆಯುತ್ತಾನೆ. ದಲಿತ ಸಾಹಿತ್ಯದಲ್ಲಿ ದಲಿತರ ಆಕ್ರೋಶ ವ್ಯಕ್ತವಾಗುತ್ತದೆ. ಈ ಆಕ್ರೋಶವು ತನ್ನ ವೇದನೆ ಹಾಗೂ ಸಮಸ್ಯೆಯನ್ನು ವ್ಯಕ್ತಮಾಡಲೆಂದೇ ಬಂದಿದೆ.

◆ ಭಾರತೀಯ ದಲಿತ ಸಾಹಿತ್ಯವು ಮತ್ತಷ್ಟು ಗಟ್ಟಿಗೊಳ್ಳುವ ಅಗತ್ಯವಿದೆಯೇ?

ಭಾರತದ ಎಲ್ಲಾ ಪ್ರಾದೇಶಿಕ ಭಾಷೆಗಳಲ್ಲಿ ದಲಿತ ಸಾಹಿತ್ಯವು ನಿರ್ಮಾಣವಾಗುತ್ತಲಿದೆ. ಮರಾಠಿ, ಗುಜರಾತಿ, ತೆಲುಗು, ಹಿಂದಿ, ಬಂಗಾಲಿಯಲ್ಲಿ ಹೇರಳವಾಗಿದೆ. ದೇವನೂರ ಮಹಾದೇವ, ಸಿದ್ಧಲಿಂಗಯ್ಯ, ಮೂಡ್ನಾಕೂಡು ಚಿನ್ನಸ್ವಾಮಿ, ಅರವಿಂದ ಮಾಲಗತ್ತಿ ಇವರು ಕನ್ನಡದ ಪ್ರಮುಖ ಬರಹಗಾರರು. ಸಂತ ಬಸವೇಶ್ವರ ಹಾಗೂ ಬಂಡಾಯ ಸಾಹಿತ್ಯದಿಂದ ಕನ್ನಡ ದಲಿತ ಸಾಹಿತ್ಯ ಸಮೃದ್ಧಗೊಂಡಿದೆ. ದಲಿತ ಸಂಘರ್ಷ ಸಮಿತಿಯು ಈ ಕಾರ್ಯವನ್ನು ಮುಂದುವರಿಸಿಕೊಂಡು ಹೋಗುತ್ತಿದೆ. ಮನುಷ್ಯನ ಹಕ್ಕಿಗಾಗಿ ದಲಿತ ಲೇಖಕ ಬರೆಯುತ್ತಿದ್ದಾನೆ. ಮುಂಬರುವ ಕಾಲದಲ್ಲಿ ದಲಿತ ಸಾಹಿತ್ಯದಿಂದ ಭಾರತೀಯ ಸಾಹಿತ್ಯದ ಚಹರೆಯೇ ಬದಲಾಗುವ ಆಶೆಯಿದೆ.

◆ ದಲಿತ ಸಾಹಿತ್ಯವು ಕಲಾತ್ಮಕ ಎತ್ತರವನ್ನು ತಲುಪಿದೆಯೇ?

ದಲಿತ ಸಾಹಿತ್ಯವು ಮೂಲದಲ್ಲಿ ಜೀವನವಾದಿ ಸಾಹಿತ್ಯವಾಗಿದೆ. ಅದು ಕಲಾವಾದಿಯಲ್ಲದ್ದಿದ್ದರೂ, ಕಲಾ ಮೌಲ್ಯಕ್ಕೆ ನಮ್ಮ ವಿರೋಧವಿಲ್ಲ. ನನ್ನ 'ಸನಾತನ' ಕಾದಂಬರಿಗೆ 'ಸರಸ್ವತಿ ಸನ್ಮಾನ' ಲಭಿಸಿದೆ ಎಂದರೆ, ದಲಿತ ಲೇಖಕನ ಸಾಹಿತ್ಯವು ಈ ರೀತಿಯ ಸಾಹಿತ್ಯದ ದೃಷ್ಟಿಯಿಂದಲೂ ಶ್ರೇಷ್ಠ ಎಂದು ಸಾಬೀತಾದಂತಾಯಿತಲ್ಲ.

◆ ಭಾರತದ ಮಟ್ಟದಲ್ಲಿ ಶ್ರೇಷ್ಠ ದಲಿತ ಲೇಖಕರ್ಯಾರು?

ನನಗೆ ಈ ವಿಷಯ ಗೊತ್ತಿಲ್ಲ.

◆ ದಲಿತ ಸಾಹಿತ್ಯದಲ್ಲಿ ಮಹಿಳೆಯರ ಸಂಖ್ಯೆ ಏಕೆ ಕಡಿಮೆಯಿದೆ?

ದಲಿತ ಮಹಿಳೆಯರು ಕಡಿಮೆ ಕಲಿತಿದ್ದರಿಂದ ದಲಿತ ಸಾಹಿತ್ಯದಲ್ಲಿ ಅವರ ಸಂಖ್ಯೆ ಕಡಿಮೆಯಾಗಿದೆ. ಮಹಿಳೆಯರಲ್ಲಿ ಶಿಕ್ಷಣದ ಪ್ರಮಾಣ ತೀರಾ ಕಡಿಮೆಯಾಗಿದ್ದರಿಂದ ಅವರಿಂದ ಬರೆಯಲಾದ ಬರಹಗಳ ಪ್ರಮಾಣ ಸಹ ಕಡಿಮೆಯಾಗಿದೆ.